# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದಪ್ರಶ್ನೆ ಸಂಖ್ಯೆ : 1168
ಸದಸ್ಯರ ಹೆಸರು : ಶ್ರೀ ಟಿ.ಎನ್.ಜವರಾಯಿ ಗೌಡ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 17.12.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ಉತ್ತರ ಹೋಬಳಿ, ಯು.ಎಂ.ಕಾವಲ್ (ಮನವರ್ತೆ ಕಾವಲ್) ಸ.ನಂ.18/2 ಹಾಗೂ 18/3ರ ಮಧ್ಯ ಭಾಗದಲ್ಲಿ ಎಷ್ಟು ಎಕರೆ ಸರ್ಕಾರಿ ಬಂಡೆ ಜಾಗವಿದೆ: | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಯು.ಎಂ. ಕಾವಲ್ (ಮನವರ್ತೆ ಕಾವಲ್) ಗ್ರಾಮದ ಸ.ನಂ. 18 ಹಿಡುವಳಿ ಜಮೀನಾಗಿದ್ದು, ಈ ಸರ್ವೆ ನಂಬರಿನಲ್ಲಿ ಸ.ನಂ. 18/2 ಮತ್ತು 18/3 ಹಿಸ್ಸೆಗಳ ಮಧ್ಯಭಾಗದಲ್ಲಿ 18/36, 18/37, 18/39 ಎಂಬ ಹಿಸ್ಸೆಗಳಾಗಿ ಪೋಡಿ ದುರಸ್ತಿಯಾಗಿರುತ್ತವೆ, ವಿವರವನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ. (ಕೆಳಗಿನ ಕೋಷ್ಟಕ ನೋಡಿ) |

| ಹಿಸ್ಸಾ ನಂಬರ್ | ಐನ್ (ಎ/ಗು) | ಖರಾಬ್ (ಎಕರೆ/ಗುಂಟೆ) ಎ | ಬಿ | ಸಿ | ಬಾಕಿ (ಎ/ಗು) |
|---|---|---|---|---|---|
| 18/36 | 2-10 | - | 0-10 | 0-10 | 2-00 |
| 18/37 | 2-05 | - | 0-05 | 0-05 | 2-00 |
| 18/39 | 2-32 | - | 0-32 | 0-32 | 2-00 |
| ಒಟ್ಟು | 7-07 | - | 1-07 | 1-07 | 6-00 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಈ ಸರ್ಕಾರಿ ಬಂಡೆ ಇರುವ ಭೂಮಿಯ ಇಂದಿನ ಮಾರುಕಟ್ಟೆಯ ಬೆಲೆ ಎಷ್ಟು; (ಮಾಹಿತಿ ಒದಗಿಸುವುದು) | ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ಉತ್ತರ ಹೋಬಳಿ, ಯುಎಂ ಕಾವಲ್‌ನ (ಮನವರ್ತೆ ಕಾವಲ್) ಸರ್ವೆ ನಂ.18/2ರ ಮಧ್ಯಭಾಗದಲ್ಲಿರುವ ಸರ್ಕಾರಿ ಬಂಡೆ ಇರುವ ಭೂಮಿಗೆ ಪ್ರತ್ಯೇಕವಾಗಿ ಮಾರುಕಟ್ಟೆ ಬೆಲೆ ನಿಗಧಿಯಾಗಿರುವುದಿಲ್ಲ. ಆದಾಗ್ಯೂ ಇಡೀ ಗ್ರಾಮವಾದ ಯು.ಎಂ. ಕಾವಲ್‌ನ (ಉತ್ತರಹಳ್ಳಿ ಮನವರ್ತೆ ಕಾವಲ್)ಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಸೂಚನೆ ಸಂಖ್ಯೆ:ನೋಮು/ಸಿವಿಸಿ/99/2023-24, ಬೆಂಗಳೂರು ದಿನಾಂಕ: 27-09-2023ರ ಪುಟ ಸಂಖ್ಯೆ: 94 ಕ್ರಮ ಸಂಖ್ಯೆ:51 ರಂತೆ ಸರ್ಕಾರಿ ಮಾರ್ಗ ಸೂಚಿ ದರದಲ್ಲಿ ಎಕರೆಗೆ 1ಕ್ಕೆ ರೂ.2,24,00,000/- ನಿಗದಿಯಾಗಿದೆ. |
| ಇ) | ಈ ಬಂಡೆ ಜಮೀನನ್ನು ಅಕ್ರಮವಾಗಿ ಭೂಗಳ್ಳರ ಹೆಸರಿಗೆ ನೋಂದಣಿ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅನ್ವಯಿಸುವುದಿಲ್ಲ. |
| ಈ) | ಬಂದಿದ್ದಲ್ಲಿ ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಕಂದಾಯ ಭೂಮಾಪನ/ನೋಂದಣಿ ಇಲಾಖೆಯ ಅಧಿಕಾರಿ/ನೌಕರರ ಮೇಲೆ ಸರ್ಕಾರ | ಅನ್ವಯಿಸುವುದಿಲ್ಲ. |

| | | |
|---|---|---|
| | ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | |
| ಉ) | ಅಕ್ರಮವಾಗಿ, ಕಾನೂನುಬಾಹಿರವಾಗಿ ಈ ಬಂಡೆ ಜಾಗವನ್ನು ನೋಂದಾಣಿ ಮಾಡಿಸಿಕೊಂಡು ಖಾತೆ ಮಾಡಿಸಿಕೊಂಡಿರುವ ಭೂಗಳ್ಳರ ವಿವರ ನೀಡುವುದು; ಹಾಗೂ ಅವರ ಮೇಲೆ ಸರ್ಕಾರ ತೆಗೆಯುಕೊಂಡಿರುವ ಕ್ರಮಗಳೇನು? | ಉತ್ತರಹಳ್ಳಿ ಮನವರ್ತೆ ಕಾವಲ್ ಬಂಡೆ ಜಮೀನೆಂದು ನಮೂದಿಸಿ ಯಾವುದೇ ದಸ್ತಾವೇಜುನ್ನು ನೋಂದಾಯಿಸಿರುವುದು ಕಂಡುಬಂದಿರುವುದಿಲ್ಲ ಎಂದು ಜಿಲ್ಲೆಯ ಉಪನೋಂದಣಾಧಿಕಾರಿಗಳು ಉತ್ತರ ಸಲ್ಲಿಸಿರುತ್ತಾರೆ. ಆದಾಗ್ಯೂ ಈ ಬಗ್ಗೆ ದಾಖಲಾತಿಗಳಲ್ಲಿ ಪರಿಶೀಲಿಸಲಾಗಿ ಯು.ಎಂ. ಕಾವಲ್ ನ (ಉತ್ತರಹಳ್ಳಿ ಮನವರ್ತೆ ಕಾವಲ್) ಸರ್ವೆ ನಂ. 18/2 ಮತ್ತು 18/3ರಲ್ಲಿ ರಾಜರಾಜೇಶ್ವರಿ ನಗರ ಹಾಗೂ ಜೆಪಿ ನಗರ ಉಪನೋಂದಣಿ ಕಛೇರಿಗಳಲ್ಲಿ ಈ ಕೆಳಕಂಡ ದಸ್ತಾವೇಜುಗಳನ್ನು ನೋಂದಾಯಿಸಿರುವುದು ಕಂಡುಬಂದಿರುತ್ತದೆ.<br><br>**ಉಪನೋಂದಣಾಧಿಕಾರಿ, ಕಛೇರಿ, ರಾಜರಾಜೇಶ್ವರಿ ನಗರ**<br><br>**1.** ದಾನಪತ್ರದ ದಸ್ತಾವೇಜು ಸಂಖ್ಯೆ:7139/24-25 ದಿನಾಂಕ : 04-10-2024 ಶ್ರೀ ಬಿ ಶಾಮಣ್ಣ, ಶ್ರೀಮತಿ ಭಾರತಿ ಇವರಿಂದ ಎಂ. ಮಂಜುನಾಥ್ ಇವರಿಗೆ ದಾನಪತ್ರ ನೋಂದಾಯಿಸಲಾಗಿದೆ.<br>**2.** ಹಕ್ಕು ಬಿಡುಗಡೆ ಪತ್ರ ದಸ್ತಾವೇಜು ಸಂಖ್ಯೆ:4306/24-25 ದಿನಾಂಕ: 23-07-2024 ಶ್ರೀಮತಿ ಭವ್ಯ ಎನ್, ಅರವಿಂದ ಎನ್ ಇವರಿಂದ ಶ್ರೀಮತಿ ಭಾರತಿ ಇವರಿಗೆ ಹಕ್ಕುಪತ್ರ ಬಿಡುಗಡೆ ಪತ್ರ ನೋಂದಾಯಿಸಲಾಗಿರುತ್ತದೆ.<br>**3.** ಹಕ್ಕು ಬಿಡುಗಡೆ ಪತ್ರ ದಸ್ತಾವೇಜು ಸಂಖ್ಯೆ:4309/24-25 ದಿನಾಂಕ: 23-07-2024 ಶ್ರೀಮತಿ ಜಲಜಾ., ಶ್ರೀಮತಿ ಲತಾ ಎಸ್, ಶ್ರೀ ಅನಿಲ್ ಕುಮಾರ್ ಎಸ್ ಮತ್ತು ಶ್ರೀ ಪ್ರವೀಣ್ ಕುಮಾರ್ ಎಸ್ ಇವರಿಂದ ಶ್ರೀ ಬಿ ಶಾಮಣ್ಣ ಇವರಿಗೆ ಹಕ್ಕು ಬಿಡುಗಡೆ ಪತ್ರವನ್ನು ನೋಂದಾಯಿಸಲಾಗಿರುತ್ತದೆ.<br><br>**ಉಪನೋಂದಣಾಧಿಕಾರಿ ಕಛೇರಿ, ಜೆಪಿ ನಗರ**<br><br>ಸರ್ವೆ ನಂ 18/2 ರಲ್ಲಿ 11-ಇ ನಕ್ಷೆ ನಂ.20020825831529001 ದಿನಾಂಕ: 15-10-2025 ರಂದು ದಸ್ತಾವೇಜು ಸಂಖ್ಯೆ:04524/25-26 ರಂತೆ ಒಟ್ಟು ಕುಟುಂಬದ ಮಧ್ಯೆ ವಿಭಾಗ ಪತ್ರ ನೋಂದಾಯಿಸಲಾಗಿರುತ್ತದೆಂದು ಜಿ.ನೋಂ ಜಯನಗರ ರವರು ನೀಡಿರುವ ವರದಿಯಲ್ಲಿ ಕಂಡುಬಂದಿರುತ್ತದೆ. |

ಸಂಖ್ಯೆ: ಆರ್‌ಡಿ 216 ಎಲ್‌ಜಿಕ್ಯೂ 2025

**(ಡಾ. ಪರಮೇಶ್ವರ)**
ಉಪ ಮುಖ್ಯಮಂತ್ರಿ